## ದಿನಾಂಕ 06-12-2010 ರಂದು ನಡೆದ ಆಯೋಗದ ಸಭೆಯ ನಡುವಳಿಗಳು

| ಕ್ರ.ಸಂ | ಅಧಿಕಾರಿಯ ಹೆಸರು | ಪದನಾಮ |
|---|---|---|
| 1. | ಡಾ॥ ಹೆಚ್.ಎನ್.ಕೃಷ್ಣ | ರಾಜ್ಯ ಮಾಹಿತಿ ಆಯುಕ್ತರು |
| 2. | ಶ್ರೀ ಜೆ.ಎಸ್.ವಿರೂಪಾಕ್ಷಯ್ಯ | ರಾಜ್ಯ ಮಾಹಿತಿ ಆಯುಕ್ತರು |
| 3. | ಶ್ರೀ ಬಿ.ಎ.ನಾಗೇಶ್ | ಕಾರ್ಯದರ್ಶಿಗಳು |
| 4. | ಶ್ರೀ ಶ್ರೀರಾಮ ರೆಡ್ಡಿ | ಕಾನೂನು ಅಧಿಕಾರಿಗಳು |
| 5. | ಶ್ರೀ ಟಿ. ಅಶೋಕ | ಅಧೀನ ಕಾರ್ಯದರ್ಶಿಗಳು |
| 6. | ಶ್ರೀ ಹೆಚ್.ಅನಂತ ಕುಮಾರ್ | ಶಾಖಾಧಿಕಾರಿಗಳು. |

1) ಕಾನೂನು ಪಧವಿಧರರ ಸೇವೆಯನ್ನು ಪಡೆಯುವ ಬಗ್ಗೆ:

ಆಯೋಗ ರಚಿಸಿರುವ ಸಮಿತಿಯ ನಡುವಳಿಯನ್ನು ಪರಿಶೀಲಿಸಲಾಯಿತು. ಸಮಿತಿಯ ನಡುವಳಿಯಂತೆ ಶ್ರೀ ಸೋನಪ್ಪ ರೆಡ್ಡಿ, ಮತ್ತು ಶ್ರೀಮತಿ ನಿವೇದಿತಾ ರವರನ್ನು ಲಾ ಇನ್‌ಟರ್ನ್ ಹುದ್ದೆಗೆ ನೇಮಿಸಲು ತೀರ್ಮಾನಿಸಲಾಯಿತು. ಆಯೋಗವು ಈಗಾಗಲೇ **ಲಾ-ಇನ್‌ಟರ್ನ್ಸ್** ಗಳ ಕರ್ತವ್ಯಗಳನ್ನು ನಿಗಧಿಪಡಿಸಲಾಗಿದೆ ಸರ್ಕಾರದ ಆದೇಶದಂತೆ ಸದರಿ ಅಭ್ಯರ್ಥಿಗಳಿಂದ ಮುಚ್ಚಳಿಕೆ ಪಡೆಯಬೇಕೆಂದು ತೀರ್ಮಾನಿಸಲಾಯಿತು.

2) ಕರ್ನಾಟಕ ಉಚ್ಚನ್ಯಾಯಲಯದಲ್ಲಿ ಆಯೋಗದ ಬಾಕಿ ಇರುವ ಪ್ರಕರಣಗಳ ಕುರಿತು:

ಆಯೋಗದ ಕೆಲವು ಪ್ರಕರಣಗಳು ಕರ್ನಾಟಕ ಉಚ್ಚನ್ಯಾಯಲಯದಲ್ಲಿ ವಿವಿಧ ಹಂತಗಳಲ್ಲಿ ಬಾಕಿ ಇರುತ್ತವೆ. ಅನೇಕ ಪ್ರಕರಣಗಳಲ್ಲಿ ಆಯೋಗದ ಪರವಾಗಿ ಸರ್ಕಾರಿ ವಕೀಲರು ನೋಟಿಸ್‌ನ್ನು ಸ್ವೀಕರಿಸಿರಿಸುತ್ತಿದ್ದು, ಆಯೋಗದ ಗಮನಕ್ಕೆ ಸಕಲಾದಲ್ಲಿ ಬರುತ್ತಿಲ್ಲ. ಆಯೋಗದ ನಿರ್ಣಯದಂತೆ ಶ್ರೀ ಶರತ್ ಗೌಡ ಎಂಬುವವರನ್ನು ಆಯೋಗದ ವಕೀಲರಾಗಿ ನೇಮಿಸಿರುತ್ತದೆ. ಅಡ್ವೋಕೇಟ್ ಜನರಲ್ ಕಛೇರಿಯೊಂದಿಗೆ ಸಮಾಲೋಚಿಸಿ ಸರ್ಕಾರಿ ವಕೀಲರಲ್ಲಿ ಬಾಕಿ ಇರುವ ಆಯೋಗದ ಪ್ರಕರಣಗಳನ್ನು ಶ್ರೀ ಶರತ್ ಗೌಡ ರವರಿಗೆ ವಹಿಸಲು, ಅಡ್ವೋಕೇಟ್ ಜನರಲ್ ರವರಿಗೆ ಪತ್ರ ಬರೆಯಲು ತೀರ್ಮಾನಿಸಲಾಯಿತು. ಈ ಎಲ್ಲಾ ಪ್ರಕರಣಗಳಲ್ಲಿ ಆಯೋಗದ ವಕೀಲರು ಕಂಡಿಕೆವಾರು ಉತ್ತರಗಳನ್ನು ಕಾನೂನು ಅಧಿಕಾರಿಗಳ ಮೂಲಕ ಆಯೋಗದ ಪರಿಶೀಲನೆಗೆ ಸಲ್ಲಿಸಬಹುದಾಗಿರುತ್ತದೆ.

3) 2011-2012ನೇ ಸಾಲಿನ ಆಯೋಗ ಆಯವ್ಯಯ ಕುರಿತು:.

2011-12ನೇ ಸಾಲಿಗೆ ಸಂಬಂಧಿಸಿದಂತೆ ಆಯೋಗದ ಆಯವ್ಯಯವನ್ನು ಪ್ರಧಾನ ಕಾರ್ಯದರ್ಶಿ, ಸಿ.ಆ.ಸು.ಇ. ೪ ಜನ ಸ್ಪಂದನ ಕೋಶ ಇವರ ಮುಖಾಂತರ ಆರ್ಥಿಕ ಇಲಾಖೆಗೆ ಸಲ್ಲಿಸಬೇಕಾಗಿರುತ್ತದೆ. 2011-12ನೇ ಸಾಲಿಗೆ ಆಯೋಗದ ಅಧಿಕಾರಿ ಮತ್ತು ನೌಕರರ ವೇತನ ಭತ್ಯೆಗಳಿಗಾಗಿ ರೂ.267.94 ಲಕ್ಷಗಳುಬೇಕಾಗಿದ್ದು, ಇದಕ್ಕೆ ವಿವರವಾದ ಅನುಬಂಧ-ಬಿಯನ್ನು ತಯಾರಿಸಿ ಆರ್ಥಿಕ ಇಲಾಖೆಗೆ ಕಳುಹಿಸಲು ಸಲ್ಲಿಸಲಾಗಿದೆ. ಆಯೋಗದ ದೂರವಾಣಿ ವೆಚ್ಚಗಳಿಗೆ ರೂ.12.60 ಲಕ್ಷಗಳು, ವಾಹನಗಳ ಇಂಧನ ಮತ್ತು ನಿರ್ವಹಣೆಗೆ ರೂ.14.40 ಲಕ್ಷಗಳು, ಕಛೇರಿಯ ಸಾಮಾನ್ಯ ವೆಚ್ಚಕ್ಕಾಗಿ ರೂ.32.40 ಲಕ್ಷಗಳು ಹಾಗೂ ಕಛೇರಿಯ ಯಂತ್ರೋಪಕರಣ ಮತ್ತು ಮುಂತಾದ ಸಾಮಾಗ್ರಿ ಖರೀದಿಗಾಗಿ ರೂ.62.50 ಲಕ್ಷಗಳ ಆಯವ್ಯಯ ಅಂದಾಜು

ಪಟ್ಟಿಯನ್ನು ಪರಿಶೀಲನೆಗೆ ಮತ್ತು ಅನುಮೋದನೆಗೆ ಸಲ್ಲಿಸಲಾಗಿದೆ. ಮಿಥಿಕ್ ಸೊಸೈಟಿ ಬಾಡಿಗೆಗೆ ಸಂಬಂಧಿಸಿದಂತೆ ರೂ.40.08 ಲಕ್ಷಗಳು ಬೇಕಾಗುತ್ತದೆ ಎಂಬುದನ್ನು ಪರಿಶೀಲಿಸಲಾಯಿತು.

(ಡಾ॥ ಹೆಚ್.ಎನ್ ಕೃಷ್ಣ)
ರಾಜ್ಯ ಮಾಹಿತಿ ಆಯುಕ್ತರು

(ಜೆ.ಎಸ್. ವಿರೂಪಾಕ್ಷಯ್ಯ)
ರಾಜ್ಯ ಮಾಹಿತಿ ಆಯುಕ್ತರು